ರಿಂದ ಸರ್ಕಾರದವರು ಆ ಪೌರ ಸಭೆಗೆ ಹಣ ಸಹಾಯ ಮಾಡುವುದನ್ನು ಪುನರ್ಪರಿಶೀಲನೆ ಮಾಡುತ್ತಾರೆಯೆ ?

Mr. SPEAKER.—It need not be answered.

ಶ್ರೀ ಎಚ್. ಕೆ. ಶಿವರುದ್ರಪ್ಪನವರು.—ಅವರು ಅಂಥ ರಕ್ಷಣೆಯನ್ನು ಒದಗಿಸಿಕೊಳ್ಳಲು ಸಾಧ್ಯವಿಲ್ಲವೆಂದು ಅಷ್ಟೊರಾಗಿ ಹೇಳಿರುತ್ತಾರೆಯೇ ?

Mr. SPEAKER.—The Hon'ble Minister need not answer that.

ಶ್ರೀ ಎಚ್. ಕೆ. ಶಿವರುದ್ರಪ್ಪನವರು.—ಈ ಆವೃತ್ತ ಅನಾವೃತ್ತ ಖರ್ಚುಗಳೆಲ್ಲ ಒಟ್ಟು ಎಷ್ಟಾಗುತ್ತದೆಂಬುದನ್ನು ಹೇಳುವುದಕ್ಕಾಗುತ್ತದೆಯೇ ?

ಶ್ರೀ ಟಿ. ಚೆನ್ನಯ್ಯನವರು.—ಒಟ್ಟು 17 ಸಾವಿರದ 264 ರೂಪಾಯಿಗಳು ಖರ್ಚಾಗುತ್ತವೆ. ಈ ಪೈಕಿ, 8,264 ರೂಪಾಯಿಗಳು ನೀರು ಸರಬರಾಯಿಗಾಗಿ ಖರ್ಚಾಗುತ್ತವೆ. ಇದನ್ನು ಮುಂದೆ ಸರ್ಕಾರಕ್ಕೆ ಮುನಿಸಿಪಾಲಿಟಿಯವರು ಯಾವ ರೀತಿಯಲ್ಲಿ ತೀರಿಸಲು ಸಾಧ್ಯವಿದೆ ಮತ್ತು ಆ ಪೊಬಲಗನ್ನು ಯಾವ ಫಂಡಿನಿಂದ ಮಾಡ್ ಮಾಡಲಾಗುತ್ತದೆ ಎಂಬ ವಿವರಗಳನ್ನು ಕೇಳಿದ್ದೇವೆ.

ಶ್ರೀ ಎಚ್. ಕೆ. ಶಿವರುದ್ರಪ್ಪನವರು.—ಅವರು ತಮಗೆ ಖೋತಾ ಬಜೆಟ್ಟಿದೆ, ಈ ಖರ್ಚನ್ನು ಕೊಡುವುದಕ್ಕಾಗುವುದಿಲ್ಲವೆಂದು ತಿಳಿಸಿಲ್ಲವೇ ?

ಶ್ರೀ ಟಿ. ಚೆನ್ನಯ್ಯನವರು.—ಅವರು ತಿಳಿಸಿಲ್ಲ.

ಶ್ರೀ ಎಚ್.ಕೆ. ಶಿವರುದ್ರಪ್ಪನವರು.—ಇಂಥ ಸಾಲದ ಅವಕಾಶವನ್ನು ತಾವು ಮುನ್ಸಿ ಯಾರಿಗೂ ಕೊಡರಾಗಿಲ್ಲವೇ ?

ಶ್ರೀ ಟಿ. ಚೆನ್ನಯ್ಯನವರು.—ಕೊಡರಾಗಿದೆ.

ಶ್ರೀ ಎಂ. ಲಿಂಗಣ್ಣನವರು (ನಂಜನಗೂಡು).—ಆ ಮುನಿಸಿಪಾಲಿಟಿಯವರು ಅವರ ಅನಿವಾರ್ಯವನ್ನು ತಮಗೆ ತಿಳಿಸಿದ್ದು ಯಾವಾಗ ?

ಶ್ರೀ ಟಿ. ಚೆನ್ನಯ್ಯನವರು.—ತಾ। 28-6-50ರಲ್ಲಿ.

ಶ್ರೀ ಎಂ. ಲಿಂಗಣ್ಣನವರು.—ಹಾಗೆ ಅವರು ತಿಳಿಸಿದ ಮೇಲೆ 2 ವರ್ಷಗಳು ಕಳೆದು ಹೋಗಿರುವುದರಿಂದ ಈಗ ಪುನಃ ಅದರ ಭದ್ರತೆ ಅಥವಾ ನಾಭದ್ರತೆಯ ವಿಷಯವಾಗಿ ತನಿಖೆಯನ್ನೇನಾದರೂ ನಡೆಸಿದ್ದೀರಾ ?

ಶ್ರೀ ಟಿ ಚೆನ್ನಯ್ಯನವರು.—ಮುನಿಸಿಪಾಲಿಟಿಯವರು ಮಾಡತಕ್ಕ ಖರ್ಚಿಗೆ ಸರಿಯಾದ ಉತ್ಪತ್ತಿಮಾರ್ಗವನ್ನು ತೋರಿಸಲು ಸರ್ಕಾರ ಕೇಳಿದೆ. ಹಾಗೆ ಅವರು ಅದನ್ನು ತೋರಿಸಿದರೆ ಅವರಿಗೆ ಸಲ್ಲಬೇಕಾದ ಗ್ರಾಂಟನ್ನು ಮಂಜೂರು ಮಾಡರಾಗುತ್ತದೆ.

Drinking Water Wells in Hangala.

Q.—360. Sri H. K. SHIVARUDRAPPA (Gundlupet-Heggaddevankote).—

Will the Government be pleased to state :—

(*a*) the population of Hangala in Gundlupet Taluk ;

(*b*) the number of drinking water wells in the above village ;

(*c*) the average depth of those wells ;

(*d*) in how many of the wells there is water ; and whether they are aware that the people of those villages are experiencing difficulty for water ;

(*e*) if so, the steps Government have taken to provide water facilities to the above-mentioned village ?

A.—Sri T. CHANNIAH (Minister for Public Health and Local Self-Government).—

(*a*) 2,769.

(*b*) 13.

(*c*) 60 to 70 feet.

(*d*) 11 wells.

Yes ; on account of the distance of the wells from the village.

(*e*) An estimate for Rs. 16,600 towards the capital expenditure for having protected water supply to this village has been prepared. The annual maintenance charge will be Rs. 2,500. The question is being examined.

ಶ್ರೀ ಎಚ್. ಕೆ. ಶಿವರುದ್ರಪ್ಪನವರು.—ಉತ್ತರದಲ್ಲಿ 11 ಬಾವಿಗಳೆಂದು ತಿಳಿಸಿದ್ದೀರಿ. ಆದರೆ ಆ ಊರಿನ ಜನರು ಈ ದಿವಸ ಕುಡಿಯುವ ನೀರನ್ನು ಈ ಬಾವಿಗಳಿಂದಲೇ ತರುತ್ತಿದ್ದಾರೆಂದು ತಾವು ಗಮನಿಸಿದ್ದೀರಾ ?

ಶ್ರೀ ಟಿ. ಚೆನ್ನಯ್ಯನವರು.—ಈ 11 ಬಾವಿಗಳಲ್ಲೂ ನೀರಿರುವುದರಿಂದ, ಅವರು ಈ ಬಾವಿಗಳಿಂದಲೇ ನೀರನ್ನು ಬಳಸುತ್ತಿದ್ದಾರೆ.

ಶ್ರೀ ಎಚ್. ಕೆ. ಶಿವರುದ್ರಪ್ಪನವರು.—ಹಾಗಿಲ್ಲ. ಈ ಬಾವಿಗಳಲ್ಲಿ ನೀರು ಇಲ್ಲದೆ ಅವರು ಸಮೀಪದ ಕೆರೆಯೊಂದರಿಂದ ನೀರನ್ನು ತರುತ್ತಿದ್ದಾರೆಂದರೆ ಅದನ್ನು ತಾವು ಒಪ್ಪಿಕೊಳ್ಳುತ್ತೀರಾ ?

ಶ್ರೀ ಟಿ. ಚೆನ್ನಯ್ಯನವರು.—ನಮಗೆ ಆ ವಿಚಾರ ತಿಳಿಯದು.

ಶ್ರೀ ಎಚ್. ಕೆ. ಶಿವರುದ್ರಪ್ಪನವರು.—ಈ ತಾಲ್ಲೂಕಿನ ಅನೇಕ ಬಾವಿಗಳಲ್ಲಿ ನೀರಿರುವುದಿಲ್ಲವೆಂಬ ಅಂಶ ಸರ್ಕಾರದವರ ಗಮನಕ್ಕೆ ಬಂದಿಲ್ಲವೇ ?

Sri T. CHANNIAH.—Is it so ? We have no information.

ಶ್ರೀ ಎಚ್. ಕೆ. ಶಿವರುದ್ರಪ್ಪನವರು.—ಈ ಅಂದಾಜನ್ನು ತಾವು ತಯಾರಿಸಿದ್ದು ಯಾವಾಗ ?

Sri T. CHANNIAH.—Notice.

ಶ್ರೀ ಎಚ್. ಕೆ. ಶಿವರುದ್ರಪ್ಪನವರು.—ಈ ಎರ್ಲಾ ತಾಲ್ಲೂಕಿನ ಜನರಿಗೆ ತುಂಬಾ ತೊಂದರೆಯಾಗಿರುವುದರಿಂದ ಅದನ್ನು ಪರಿಹರಿಸಲು ತಾವು ಬೇಗ ಕಾರ್ಯಕ್ರಮಗಳನ್ನು ಕೈಗೊಳ್ಳರಾಗುತ್ತದೆಯೇ ?

Mr. SPEAKER.—Please read the last sentence in the printed answer. it is said the question is being examined.